ಸಾಗಿಸಿಕೊಂಡು ಸ್ಟೇಷನ್‌ನಿಂದ ಹೊರಗೆ ಬಂದು ಆಟೋ ಹತ್ತಿಸಿಕೊಂಡು ಮೀಟಿಂಗ್ ಜಾಗಕ್ಕೆ ಬಂದಿದ್ದಳು. ಅಲ್ಲೀ ತನಕ ತಾರಕ್ಕನಿಗೆ ತನ್ನೆಮ್ಮಿ, ಮನೆ, ಗಂಡ, ಮಗ ಎಲ್ಲಾ ಮರ್ತೇ ಹೋಗಿತ್ತು. ಅದ್ಯಾಕೋ ಏನೋ ಗಂಡಂಗೆ ಫೋನು ಮಾಡ್ಲಾ ಅಂದ್ಕಂಡ್ರೂ, 'ಏ ಸುಮ್ಕಿರು' ಅಂತ ಅಂದಾನೋ ಎಂದುಕೊಂಡು ಮೊಮ್ಮಕ್ಕಳ ಕಡೆ ನೋಡಿ ಸುಮ್ಮನಾದರು.

ಸೊಸೆ ಹಿಂದೆ ನಾನೊಬ್ಬೇ ಬಂದಿರೋದು ಅಂತ ಸ್ವಲ್ಪ ಕಸಿವಿಸಿ ತಾರಕ್ಕನಿಗೆ ಇತ್ತು. ಆದ್ರೆ ಇನ್ನೂ ಇಬ್ರು ಹೀಗೇ ಬಂದಿರೋದು ನೋಡಿ ಸಮಾಧಾನ ಆಗಿತ್ತು. ಒಬ್ಬರು ಅಮ್ಮ, ಇನ್ನೊಬ್ಬರು ಅತ್ತೆ ಮೊಮ್ಮಕ್ಕಳ ಜೊತೆ ನಿಂತಿದ್ರು. ಮೀಟಿಂಗ್ ಶುರುವಾದ ಮೇಲೆ ಮೊಮ್ಮಕ್ಕಳ ಆಟ ನೋಡ್ಕೊಂಡು, ಅವು ಅತ್ತಾಗ ಎತ್ತಿಕೊಂಡು ಸಮಾಧಾನ ಮಾಡ್ಕೊಂಡು ಅವ್ರವ್ರೇ ಪರಿಚಯ ಮಾಡ್ಕೊಂಡು ಊರುಕೇರಿ ತಿಳಿದುಕೊಂಡು ಅತ್ತೇರು, ಅಮ್ಮಂದಿರು ಮೀಟಿಂಗ್ ಹಾಲಿನ ಹೊರಗಿನ ಪಾರ್ಕಲ್ಲಿ, ಹಜಾರದಲ್ಲಿ ಓಡಾಡಿಕೊಂಡಿದ್ರು. ತಾರಕ್ಕನಿಗೆ ಆಗಾಗ್ಗೆ ಮಂಗಳ ಎಮ್ಮಿ ಬಗ್ಗೆ ಯೋಚನೆ ಬಂದ್ರೂನೂವೆ ಏನೂ ಮಾಡಕ್ಕಾಗ್ಲಿಲ್ಲ. ಸೊಸೆ ಮೀಟಿಂಗ್ ಮಧ್ಯ ಹೊರಬಂದು ಎರಡು ಮೂರು ಸರ್ತಿ ಕೈಕೂಸಿಗೆ ಹಾಲು ಕುಡಿಸಿದ್ಳು. ಒಳಗಿಂದ ಬಿಸ್ಕತ್ ತಂದು ದೊಡ್ಡ ಮಗುವಿಗೆ ಕೊಟ್ಟಿದ್ಳು. ಮಕ್ಕಳೇನೂ ದೊಡ್ಡ ಗಲಾಟೆ ಮಾಡಿರಲಿಲ್ಲ. ಮಧ್ಯಾಹ್ನ ಊಟದ ಹೊತ್ತಿನಲ್ಲಿ ಸೊಸೆ ಗಂಡನ ಜೊತೆ ಫೋನಲ್ಲಿ ಅದೇನೂ ಪಿಸಪಿಸ ಮಾತಾಡಿದ್ದು ನೋಡಿದ್ರೂನೂ ಎಮ್ಮಿ ಬಗ್ಗೆ ಒಂದು ಮಾತು ಕೇಳಾಣ ಅಂತ ಅಂದುಕೊಂಡ್ರೂ ಯಾಕೋ ಗಂಡ ನಗಾಡಿದರೆ ಅಂತ ಅಂದುಕೊಂಡು ಸುಮ್ಮನಾದರು.

ಅವತ್ತಿನ ಮೀಟಿಂಗ್ ಮುಗಿಯಲಿಕ್ಕೆ ಸಂಜೆ ಸ್ವಲ್ಪ ಹೊತ್ತೇ ಆಗಿತ್ತು. ಸೊಸೆ ಲಕ್ಷ್ಮೀ ಹೊರಬಂದು ಚಿಕ್ಕ ಮಗುವಿಗೆ ಹಾಲು ಕುಡಿಸಕ್ಕೆ ಅತ್ತೆ ಪಕ್ಕದಲ್ಲೇ ಕೂತಳು. ಸ್ವಲ್ಪ ಬಗ್ಗಿ, ನಿಧಾನವಾಗಿ ಅತ್ತೆ ಕಿವಿ ಹತ್ರ ಬಂದು, 'ಅವ್ವ, ಮಂಗಳ ಸೊರ ಬಿಡ್ತಿಲ್ವಂತೆ' ಅಂದಳು. ತಾರಕ್ಕನಿಗೆ ಗ ರ ಬ ಡಿ ದ ಂ ತಾ ಯ್ತು. ಈಗೇನು ಮಾಡೋದು? ಅಂದ್ರೆ ನೆನ್ನೆ ರಾತ್ರಿ, ಬೆಳಗ್ಗೆ ಮತ್ತೆ ಈಗ ಸಂಜೇನೂ ಸೊರ ಬಿಡ್ಲಿಲ್ಲ ಅಂದ್ರೆ ಎಷ್ಟೊ ನೋವಾಗಿರಬೇಕು. ತಥ್, ಈ ಬೆಂಗ್ಳೂರು ಸಹವಾಸಾನೇ ಬೇಕಿರ್ಲಿಲ್ಲ. ಈ ಶ್ರೀದೇವಿ ಯಾಕೆ ಬಂದು ಕೇಳಬೇಕಿತ್ತು. ಈ ಲಕ್ಷ್ಮೀಗ್ಯಾಕೆ ಬೇಕಿತ್ತು ಬೆಂಗ್ಳೂರು ಮೀಟಿಂಗ್, ನಾನ್ಯಾಕೆ ಬರ್ಬೇಕಿತ್ತು ಇಲ್ಲಿ ಸುಮ್ನೆ ಮಕ್ಳನ್ನ ನೋಡ್ಕೋಳೋಕೆ. ತಾರಕ್ಕನಿಗೆ ಕೆಲವೇ ಕ್ಷಣಗಳಲ್ಲಿ ಇದೆಲ್ಲಾ ತನ್ನ ಎಮ್ಮಿ ಮಂಗಳನಿಗೆ ತೊಂದ್ರೆ ಕೊಡ್ಬೆಕ್ಕೇ ಮಾಡಿದ ಹುನ್ನಾರ ಅನ್ನಿಸತೊಡಗಿತ್ತು.

ಮಾತೇ ಹೊರಡಲಿಲ್ಲ. ಸಿಟ್ಟು ಬಂದ್ರೂ ಯಾರ ಮೇಲೆ ತೀರಿಸ್ಕೊಳೋದು. ಸೊಸೇನ ಬೈದು ಬಿಡಕ್ಕೆ ಪದಗಳ ಪ್ರವಾಹವೇ ತಲೆಯಿಂದ ಗಂಟಲಿಗಿಳಿದು ಬಾಯಿಯಿಂದ ಸುರಿದುಬಿಡಬೇಕಿತ್ತು!

ಅಯ್ಯೋ ಪಾಪ ಮಂಗಳಾ. ತಾರಕ್ಕನ ದುಃಖ ಉಮ್ಮಳಿಸಿಯೇ ಬಿಟ್ಟಿತು.

ಆಗಲೇ ಸೊಸೆಯ ಫೋನ್ ಶಬ್ದ ಮಾಡಿತು. ಆ ಕಡೆ ಶೇಖರ. ಹೆಂಡತಿಗೆ ಮತ್ತೆ ಅವನು ಮಂಗಳನ ಸುದ್ದಿಯನ್ನೇ ಹೇಳ್ತಿದ್ದ. ಲಕ್ಷ್ಮೀ ಸುಮ್ಮನೆ ಕೇಳಿ ತುಟಿ ಕಡಿದುಕೊಂಡು ಅಸಹಾಯಕಳಾಗಿ ಅತ್ತೆಯತ್ತ ನೋಡಿದಳು. ಮಕ್ಕಳೆರೆಡೂ ಅಜ್ಜಿಯನ್ನೂ ಅಮ್ಮನನ್ನೂ ಪಿಳಿಪಿಳಿ ನೋಡುತ್ತಿದ್ದವು. ಗಂಡ ಹೇಳಿದನೆಂದು ಲಕ್ಷ್ಮೀ ಫೋನನ್ನು ಅತ್ತೆಗೆ ಕೊಟ್ಟಳು.

'ಮಗಾ' ಎಂದ ತಾರಕ್ಕ ಮುಂದೆ ಮಾತನಾಡಲಿಕ್ಕೂ ಆಗದೆ ಜೋರಾಗಿ ಅತ್ತೇ ಬಿಟ್ಟಳು. ಅಲ್ಲಿದ್ದವರೆಲ್ಲಾ ಏನಾಯ್ತು ಎಂದು ಬಂದು ಸುತ್ತುವರೆದೇಬಿಟ್ಟರು. ಲಕ್ಷ್ಮೀಗೆ ಇರಸುಮುರಿಸಾಯ್ತು. 'ಅತ್ತೇ ಅತ್ತೇ ಸುಮ್ಕಿರಿ ಅಳಬ್ಯಾಡಿ' ಅಂತ ಏನೋ ಹೇಳಕ್ಕೆ ಹೊರಟವಳನ್ನ, 'ಎಲ್ಲಾ ನಿನ್ನಿಂದಾನೆ. ಸುಮ್ನೆ ಊರ್ನಲ್ಲಿ ಬಿದ್ದಿದ್ರಾಗ್ತಿತ್ತು. ಈಗ ನೋಡು, ಮಂಗಳನ ಗತಿ' ಎಂದು ಎಷ್ಟೋ ಹೊತ್ತಿನಿಂದ ಹಿಡಿದಿಟ್ಟುಕೊಂಡಿದ್ದ ಮಾತು ಹೊರಗೆ ಹಾಕೇಬಿಟ್ಟರು. ಈಗ ಮುಖ ಊದಿಸಿಕೊಳ್ಳುವುದು ಲಕ್ಷ್ಮೀಯ ಸರದಿಯಾಯ್ತು. ಇಲ್ಲೇನೋ ಗಾಬರಿ ಆಗ್ತಿರೋದು ಗೊತ್ತಾಗ್ತಿದ್ದಂಗೆ ಮಕ್ಕಳೆರಡೂ ಜೋಡಿ ರಾಗ ಶುರು ಮಾಡಿದರು. 'ಏ ಮುಚ್ಚಿ ಬಾಯ. ಇಲ್ಲೇನಾಯ್ತು ಅಂತಾ ತೆಗೀತೀರಿ' ಅಂತ ಲಕ್ಷ್ಮೀ ದೊಡ್ಡದರ ಕುಂಡೆಗೊಂದು ಹಾಕಿ, ಎರಡನೆಯದನ್ನ ಕಂಕ್ಳಲ್ಲಿ ಹಾಕಿಕೊಂಡು ಎದ್ದೇ ಬಿಟ್ಲು.

ಆಗ್ಲೇ ಶ್ರೀದೇವಿ ಓಡೋಡಿ ಬಂದದ್ದೇ, 'ಏನಾಯ್ತು...' ಅಂತ ತಾರಕ್ಕನ ಹತ್ತಿರ ಕೂತಳು. ತಾರಕ್ಕ ಅಳುಅಳುತ್ತಲೇ ಆಗಾಗ್ಗೆ ಮೂಗು ಸೀಟಿ ಸೆರಗಿಗೆ ಒರೆಸಿಕೊಳ್ತಾನೇ ಒಂದು ಪದ, ಎರಡು ಪದ, ಒಂದು ವಾಕ್ಯ ಕತ್ತರಿಸಿ, ಬಿಕ್ಕಳಿಸಿ ಹೇಳಿದ್ದು ಶ್ರೀದೇವಿಗೆ ಗೊತ್ತಾಯ್ತು. ಬೆಂಗಳೂರಿಗೆ ಲಕ್ಷ್ಮೀನ, ಮಕ್ಕಳನ್ನ, ಅವರತ್ತೇನ ಕರೆದುಕೊಂಡು ಹೋಗಿ ಸುರಕ್ಷಿತವಾಗಿ ಹಳ್ಳಿಗೆ ತಂದುಬಿಡುವುದು ತನ್ನ ಜವಾಬ್ದಾರಿ ಅಂತ ಪರಶುರಾಮಣ್ಣನಿಗೆ, ಶೇಖರನಿಗೆ ಭರವಸೆ ಕೊಟ್ಟು ಬಂದ ಶ್ರೀದೇವಿಗೆ ಈ ಎಮ್ಮೀ ಸಮಸ್ಯೆಗೆ ಉತ್ತರ ಹೇಗೆ ಅನ್ನೋದು ಹೊಳೀಲೇ ಇಲ್ಲ. ಅವಳೂ ಪೆಚ್ಚಾದಳು.

ಲಕ್ಷ್ಮೀ ಮುಖ ಊದಿಸಿಕೊಂಡಿದ್ದನ್ನ ನೋಡಿದ, ಮೀಟಿಂಗ್‌ಗೆ ಬೇರೊಂದು ಊರಿಂದ ಬಂದಿದ್ದವರೊಬ್ಬರು, 'ನಿಮ್ಮ ಎಮ್ಮೀಗೊಂದು ವಿಡಿಯೋ ಕಾಲು ಮಾಡಿ' ಅಂದದ್ದು ಲಕ್ಷ್ಮೀ ಕಿವಿಗೆ ಬಿದ್ದಿತು. ನಾವು ಮೊದಲೇ ಕಷ್ಟದಲ್ಲಿದ್ದೀವಿ ಇವರದೊಂದು ಚೇಷ್ಟೆ ಮಾತು ಅಂತ ಕೋಪ ಬಂದು ಕಿವಿಯೆಲ್ಲಾ ಬಿಸಿಯಾಗಿದ್ದಂತೂ ಸುಳ್ಳಲ್ಲ.

'ಅರೆ ಯಾಕಾಗ್ಬಾರ್ದು' ಅಂತ ಶ್ರೀದೇವಿ ಇಷ್ಟಗಲ ಕಣ್ಣರಳಿಸಿಕೊಂಡು, ತನ್ನ ಫೋನಲ್ಲೇ ಶೇಖರನ ನಂಬರ್ ಒತ್ತೇ ಬಿಟ್ಟಳು. 'ಏನ್ ಚ್ಯಾಷ್ಟಿ ಮಾಡ್ತಿಯೇನು' ಅಂತ ಮೊದಲು ಕೋಪ ಮಾಡಿಕೊಂಡರೂ, 'ಆಯ್ತು ಅದ್ನೂ ನೋಡ್ಬಿಡೋಣ. ಪಾರ್ವತಕ್ಕನ್ನ ಕರೆದು ಕಾಲ್ ಮಾಡ್ತೀನಿ' ಅಂತ ಶೇಖರ ಅಂದದ್ದು ಲಕ್ಷ್ಮೀಗೆ ಗೊತ್ತಾಯ್ತು.

'ಮಂಗ್ಳೀ, ನನ್ನ ಮಂಗ್ಳೀ, ನನ್ ಕಂದಾ ಕಷ್ಟಾಯ್ತೇನೆ ಇನ್ನೊಂದಿಸ ಬಂದ್ಬಿಡ್ತೀನವ್ವ.' ತಾರಕ್ಕ ಫೋನಿನಲ್ಲಿ ಎಮ್ಮೆ ಜೊತೆ ಮಾತಾಡೋದು, ಸುತ್ತ ಇದ್ದವರಿಗೆ ತಮಾಷೆಯಾಗಿ ಕಂಡರೂ, ಪರಿಸ್ಥಿತಿಯ ಬಿಗುವಿನ ಅರಿವಿದ್ದರಿಂದ ಗಂಭೀರವಾಗಿದ್ದರು. ಅತ್ತ ಕಡೆಯಿಂದ ಎಮ್ಮೆ ವ್ಹಾ–ವ್ಹಾ ಅನ್ನೋದು, ಜೋರಾಗಿ ಉಸಿರು ಬಿಡೋದು ತಾರಕ್ಕನಿಗೆ ಆಪ್ಯಾಯಮಾನವಾಗಿತ್ತು. 'ಅಂಗೆಲ್ಲಾ ಬ್ಯಾಡವ್ವ. ಸೊರ ಬಿಡವ್ವ. ಪಾರ್ವತಕ್ಕ ನಮ್ಮೋಳೇ ಮಗಾ' ಅಂದಾಗ ಎಮ್ಮಿ ಮಂಗಳಾ ತಲೆ ಆಡಿಸಿದ್ದು ತಾರಕ್ಕನ ಮಾತಿಗೋ ಇನ್ನೇನಕ್ಕೋ ಗೊತ್ತಾಗ್ತಿರಲಿಲ್ಲ.

ಆ ಕಡೆ ಪಾರ್ವತಿ ಮಂಗಳನ ತಲೆ, ಮುಖ ಸವರಿ, ಬೆನ್ನ ಮೇಲೆ ಕೈಯಾಡಿಸಿದ್ದು, ನಿಧಾನವಾಗಿ ಕೆಚ್ಚಲ ಹತ್ರ ಕೂತದ್ದು ತಾರಕ್ಕನಿಗೆ ಕಾಣಿಸ್ತು. ತಾರಕ್ಕ ಮತ್ತೆ ಮತ್ತೆ 'ಮಂಗಳಾ ಮಂಗ್ಳೀ ನೀರ್ ಕುಡ್ದಾ ಹಿಂಡಿ ತಿಂದಾ ಅಸಿ ಹುಲ್ಲು ತಿಂದ್ಯಾ' ಅಂತೆಲ್ಲಾ ಮಾತಾಡ್ತಾ ಇದ್ಳು. ಹಿಂದೆ ನಿಂತಿದ್ದ ಶ್ರೀದೇವಿ ತಾರಕ್ಕನ ಬೆನ್ನ ನೀವುತ್ತಾ ಪ್ರೋತ್ಸಾಹಿಸಿದಳು. ದೂರ ಹೋಗಿದ್ದ ಲಕ್ಷ್ಮೀನೂ ಮಕ್ಕಳನ್ನ ಹಿಡಿದುಕೊಂಡು ಹತ್ತಿರ ಬಂದು ನಿಂತಳು.

ಮಂಗಳಾ ತಲೆ ಆಡಿಸೋದು, ಜೋರಾಗಿ ಉಸಿರು ಬಿಡೋದು ಶೇಖರ ಹಿಡಿದುಕೊಂಡಿದ್ದ ಫೋನಿನಲ್ಲಿ ಕಾಣಿಸುತ್ತಿತ್ತು. ಪಾರ್ವತಕ್ಕ ನಿಧಾನವಾಗಿ ಕೆಚ್ಚಲಿಗೆ ನೀರು ಹೊಡೆದು, ಓಯ್ ಇಕಾ ಹೋಂ ಇಕಾ ಇಕಾ... ಎನ್ನುತ್ತಾ ಕೆಚ್ಚಲ ತೊಟ್ಟಿಗೆ ಕೈ ಹಾಕಿದರು. ನಿಧಾನವಾಗಿ ಹಾಲಿನ ಪಾತ್ರೆಯಲ್ಲಿ ಚೊರ್ ಚೊರ್ ಸೊರ್ ಪರ್ ಶಬ್ದ ಕೇಳಲಿಕ್ಕೆ ಆರಂಭವಾಗಿತ್ತು. ಮಂಗಳಾ ಸೊರ ಬಿಡತೊಡಗಿದಳು.

ಮೀಟಿಂಗ್ ಹಾಲಿನ ಹೊರಗೆ ಗಲಿಬಿಲಿಯಲ್ಲಿ ನಿಂತಿದ್ದವರ ಮುಖದಲ್ಲೀಗ ಮಂದಹಾಸ. ಯಾರೋ ಕೂಗೇ ಬಿಟ್ಟರು. 'ವಿಡಿಯೋ ಕಾಲಿಗೆ ಜೈ.'

ಅರ್ಧ ಗಂಟೆ ಆದ ಮೇಲೆ ಲಕ್ಷ್ಮೀಗೆ ಶೇಖರ ಫೋನ್ ಮಾಡಿ 'ಎಮ್ಮೀ ಬರೋಬ್ಬರಿ ನಾಲ್ಕೂವರಿ ಲೀಟರ್ ಹಾಲ್ ಕೊಡ್ತೇ' ಅಂತ ಸಂಭ್ರಮದಿಂದ ಹೇಳಿದ.

ಪ್ರತಿಕ್ರಿಯಿಸಿ: feedback@sudha.co.in

